1

# ಆತನ ದಿನಕ್ಕಾಗಿ ದೇವರ ಮನುಷ್ಯನು

## (1 ಅರಸು 19:14-21ಣಿ 2 ಅರಸು 2:1-18)

ಎಲೀಷನ ಸೇವೆಯು ಗಮನಾರ್ಹವಾದದ್ದು. ಆತನ ಪರಿಶ್ರಮದ ಫಲದಿಂದಾಗಿ, ಉತ್ತರದ ರಾಜ್ಯದಲ್ಲಿನ ಬಾಳನ ಆರಾಧನೆಯು ಬಹುವಾಗಿ ನಿರ್ಬಂಧಕ್ಕೆ ಒಳಗಾಯಿತು ಆಹಾಬನ ಮಗನಾದ ಯೆಹೋರಾಮನು ಸಿಂಹಾಸನಕ್ಕೆ ಬಂದಾಗ, "ತನ್ನ ತಂದೆಯು ಬಾಳನಿಗೋಸ್ಕರ ನಿಲ್ಲಿಸಿದ ಕಲ್ಲಿನ ಕಂಬವನ್ನು ತೆಗೆದು ಹಾಕಿದನು" (2 ಅರಸು 3:2ಬಿ). ಅದಲ್ಲದೆ ಎಲ್ಲಿಯವರೆಗೆ ಈಜಬೇಲಳು ಜೀವಿಸಿದ್ದಳೂ ಅಲ್ಲಿಯವರೆಗೆ ಬಾಳನ ಆರಾಧನೆಯು ಮುಂದುವರೆಯಿತು (ನೋಡಿರಿ 1 ಅರಸು 16:31; 2 ಅರಸು 10:18-28). ಯೆರೊಬ್ಬಾಳನಿಂದ ಪರಿಚಯಿಸಲ್ಪಟ್ಟ ವಿಗ್ರಹಾರಾಧನೆಯನ್ನು ಒಳಗೊಂಡ ಇತರ ದುಷ್ಟಕಾರ್ಯಗಳೂ ಸಹ ಪುನಃ ಮರಳುವುದರ ಮೂಲಕ ಪ್ರಭುತ್ವವನ್ನು ಪಡೆದವು (2 ಅರಸು 3:3). ಈ ದಿವಸಗಳೂ ಕೂಡಾ ಕಷ್ಟದಾಯಕವಾದ ಸಮಯಗಳಾಗಿವೆ. ಇಸ್ರಾಯೇಲಿನಲ್ಲಿ ದೇವರಿಗೆ ಇನ್ನೂ ಆತನ ಮನುಷ್ಯನ ಅವಶ್ಯಕತೆಯು ಇತ್ತು.

ಎಲೀಷನು ತನ್ನ ದಿನದಲ್ಲಿ ಒಳ್ಳೆಯ ಮನುಷ್ಯನು ಆಗಿದ್ದನು. ಆತನು ಎಲೀಯನಂತೆ ಎಲ್ಲರಿಗೂ ತಿಳಿದಿರುವ ಮನುಷ್ಯನು ಆಗಿರಲಿಲ್ಲ, ಆದರೆ ಆತನು ಇನ್ನೂ ಅದ್ಭುತವಾದ ವ್ಯಕ್ತಿಯಾಗಿದ್ದನು. 2 ಅರಸು ಓದಿರಿ; ಎಲೀಷನು ಈ ಪುಸ್ತಕದ ನಾಯಕನು ಆಗಿದ್ದಾನೆ. ಇಲ್ಲಿ ಚಿತ್ರಿಕರಿತವಾಗಿದ್ದುದು ಆತನ ಜೀವಿತವೇ ಹೊರತು ಇತರೆ ಅರಸರ ಜೀವಿತವಲ್ಲ.

ಎಲೀಷನ ಜೀವನದ ಸುಮಾರು ಇಪ್ಪತ್ತು ಘಟನೆಗಳು ಬೈಬಲಿನಲ್ಲಿ ದಾಖಲಾಗಿವೆ. ಆತನ ಜೀವಿತದ ಕುರಿತ ನಮ್ಮ ಅಧ್ಯಯನವು ಆತನನ್ನು ಪ್ರವಾದಿಯಾಗುವುದಕ್ಕಾಗಿ ಕರೆಯಲ್ಪಟ್ಟದ್ದರಿಂದ ಪ್ರಾರಂಭವಾಗುತ್ತದೆ.

## ದೇವರ ಆಯ್ಕೆಯ ಮನುಷ್ಯನು (1 ಅರಸು 19:14-21)

**ದೂರುಗಳು - ಮತ್ತು ಉತ್ತರಗಳು**

ನಾವು ಮೊದಲನೆಯ ಸಾರಿ ಎಲೀಷನ ಬಗೆಗೆ 1 ಅರಸು 19ರಲ್ಲಿ ಓದುವವರಾಗಿದ್ದೇವೆ. ನಿರಾಶನಾದ ಎಲೀಯನು ಹೋರೇಬ ಬೆಟ್ಟದ ಗುಹೆಯೊಂದರಲ್ಲಿ ಅಡಗಿಕೊಂಡನು. ಆತನು ಬಾಳನ ಪ್ರವಾದಿಗಳನ್ನು ಹೋರೇಬ ಬೆಟ್ಟದಲ್ಲಿ ಸೋಲಿಸಿದನು, ಆದರೆ ಆತನು ಇಸ್ರಾಯೇಲ್ಯರಲ್ಲಿ ಯಾವ ಬದಲಾವಣೆಯನ್ನೂ ಕಾಣಲಿಲ್ಲ. ಆತನು ಯೆಹೋವನಿಗೆ ನಾಲ್ಕು ದೂರುಗಳನ್ನು ಮಾಡಿದನು:

> ಅದಕ್ಕೆ ಅವನು - ಸೇನಾಧೀಶ್ವರನಾದ ಯೆಹೋವನೇ, ಇಸ್ರಾಯೇಲ್ಯರು ನಿನ್ನ ನಿಬಂಧನೆಯನ್ನು ಮೀರಿದ್ದಾರೆ, ಯಜ್ಞವೇದಿಗಳನ್ನು ಕೆಡವಿ ಹಾಕಿದ್ದಾರೆ, ಪ್ರವಾದಿಗಳನ್ನು ಕತ್ತಿಯಿಂದ ಸಂಹರಿಸಿದ್ದಾರೆ, ನಾನೊಬ್ಬನೇ ಉಳಿದು ನಿನ್ನ ಗೌರವವನ್ನು ಕಾಪಾಡುವದರಲ್ಲಿ ಆಸಕ್ತನಾಗಿದ್ದೇನು; ಆದರೆ ಅವರು ನನ್ನ ಪ್ರಾಣವನ್ನೂ ತೆಗೆಯಬೇಕೆಂದಿದ್ದಾರೆ ಎಂದು ಉತ್ತರಕೊಟ್ಟನು (ವಚನ 14).

ಯೆಹೋವನು ಎಲೀಯನ ದೂರುಗಳಿಗೆ ಒಂದರ ನಂತರ ಒಂದರಂತೆ ಉತ್ತರಿಸುತ್ತಾ

ಹೋದನು. ಪ್ರವಾದಿಯು ಮೊದಲು ಹೇಳಿದ್ದೇನೆಂದರೆ, "ಇಸ್ರಾಯೇಲ್ಯರು ನಿನ್ನ ನಿಬಂಧನೆಯನ್ನು ಮೀರಿದ್ದಾರೆ" ಎಂದು ಹೇಳಿದನು. ಅದಕ್ಕೆ ದೇವರು "ಹಜಾಯೇಲನನ್ನು ಆರಾಮ್ಯರ ಅರಸನನ್ನಾಗಿ ಅಭಿಷೇಕಿಸು" (ವಚನ 15) ಎಂದು ಹೇಳಿದನು. ಆರಾಮ್ಯರ ಅರಸನಾದಂತಹ ಹಜಾಯೇಲನು ಇಸ್ರಾಯೇಲ್ಯರನ್ನು ಶಿಕ್ಷಿಸುವನು.

ಎಲೀಯನ ಎರಡನೆಯ ದೂರು ಎನೆಂದರೆ ಯೆಹೋವನ ಯಜ್ಞವೇದಿಗಳನ್ನು ಕೆಡವಿಹಾಕಿದ್ದಾರೆ ಎಂಬುದು. ಆಹಾಬ ಮತ್ತು ಈಜೆಬೆಲಳು ಅಪವಿತ್ರ ಕೃತ್ಯಗಳ ಪ್ರೇರಕರಾಗಿದ್ದರು. ಇದಕ್ಕೆ ಪ್ರತಿಕ್ರಯಿಸುತ್ತಾ ದೇವರು ಯೇಹುವನ್ನು ಇಸ್ರಾಯೇಲ್ಯರ ಅರಸನನ್ನಾಗಿ ಅಭಿಷೇಕಿಸು ಎಂದು ಹೇಳಿದನು (ವಚನ 16ಎ). ಯೇಹುವು ಆಹಾಬನ ಸಮ್ರಾಜ್ಯವನ್ನು ನಾಶಮಾಡುವನು ಮತ್ತು ಬಾಳನ ಆರಾಧನೆಯನ್ನು ಅಳಿಸಿಬಿಡುವನು.

ಮೂರನೆಯದಾಗಿ ಇಸ್ರಾಯೇಲ್ಯರು "ಯೆಹೋವನ ಪ್ರವಾದಿಗಳನ್ನು ಕತ್ತಿಯಿಂದ ಸಂಹರಿಸಿದ್ದಾರೆ" ಎಂದು ಎಲೀಯನು ಹೇಳಿದನು (ವಚನ 14ಡಿ). ಆಗ ಯೆಹೋವನು ಇದಕ್ಕೆ ಪ್ರತಿಯಾಗಿ "ಇದರ ಬಗೆಗೆ ಚಿಂತಿಸದಿರು. ನಿನ್ನ ಬದಲಿಗೆ ಇನ್ನೊಬ್ಬನನ್ನು ಒದಗಿಸುವೆನು" ಎಂದು ಉತ್ತರಿಸಿದನು. ಆತನು ಎಲೀಯನಿಗೆ "ಅಬೇಲ್ ಮೆಹೋಲದವನಾದ ಶಾಫಾಟನ ಮಗನಾದ ಎಲೀಷನನ್ನು ನಿನಗೆ ಬದಲಾಗಿ ಪ್ರವಾದಿಯನ್ನಾಗಿ ಅಭಿಷೇಕಿಸು" (ವಚನ 16ಬಿ) ಎಂದು ಹೇಳಿದನು.

ಎಲೀಷನು ಎಲೀಯನಂತೆಯೇ ಎಲೀಯನ ನಿಯೋಗಿಯಾಗುವನು ಎಂಬ ಸೂಚನೆಯು ಕೊಡಲ್ಪಟ್ಟಂತೆಯೇ ಕೆಲ ವ್ಯಾಖ್ಯಾನಗಳು ಈ ರೀತಿಯಲ್ಲಿವೆ. ಇಲ್ಲಿನ ಆರಂಭವು "ಅಭಿಷೇಕಿಸು" ಎಂಬ ಪದದಿಂದ ಆರಂಭವಾಗಿ ಇದು ಬಹುವಾಗಿ ಸೂಚ್ಯಾರ್ಥವಾಗಿ ಬಳಿಕೆಯಾದದ್ದಾಗಿದೆ. ಅಭಿಷೇಕಿಸುವುದು, ಸಾಮಾನ್ಯವಾಗಿ ತಲೆಯ ಮೇಲೆ ಆಲಿವ್ ಎಣ್ಣೆಯನ್ನು ಸುರಿಯುವುದೇ ಆಗಿತ್ತು; ಆದರೆ ನಾವು ತಿಳಿಯದಂತೆ, ಕೇವಲ ನೈಜ್ಯವಾಗಿ ಯೇಹುವು ಮಾತ್ರ ತಲೆಯ ಮೇಲೆ ಎಣ್ಣೆಯನ್ನು ಸುರಿಸಿಕೊಂಡನು (2 ಅರಸು 9:1-6). "ಅಭಿಷೇಕಿಸುವುದರ ಮೂಲ ವಿಚಾರವು ... ದೇವರ ಆರಾಧನೆಗೋಸ್ಕರ *ತೆಗೆದಿಟ್ಟ ಭಾಗವಾಗಿತ್ತು*"[1] ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ.

ಮುಂದೆ, ಈ ಮೂವರಲ್ಲಿ ಒಬ್ಬನನ್ನು ಮಾತ್ರ ಎಲೀಯನು ವೈಯಕ್ತಿಕವಾಗಿ ದೇವರ ಸೇವೆಗೆ ತೆಗೆದಿರಿಸುತ್ತಾನೆ ಆತನೇ ಎಲೀಷನು. ಇತರೆ ಇಬ್ಬರು ಅಂದರೆ ಹಜಾಯೇಲ ಮತ್ತು ಯೇಹು. ಇವರುಗಳು ಎಲೀಷನಿಂದಲೂ ಮತ್ತು ಎಲೀಷನ ಸೇವಕನಿಂದಲೂ ನೇಮಿಸಲ್ಪಟ್ಟರು (2 ಅರಸು 8:7-15; 9:1-10). ಈ ಕೆಳಗಿನ ಆಕೃತಿಯು ಕಾರ್ಯಗಳ ಸರಣಿಯನ್ನು ದೃಷ್ಟಾಂತಿಕರಿಸುತ್ತದೆ:

ಎಲೀಯ → ಎಲೀಷ (1 ಅರಸು 19:19-21)
↓
ಎಲೀಷ → ಹಜಾಯೇಲ (2 ಅರಸು 8:7-15)
↓
ಸೇವಕ → ಯೇಹು (2 ಅರಸು 9:1-10)

ದೇವರು ದೃಷ್ಟಿಕೋನದಿಂದ ನೋಡುವುದಾದರೆ, ಎಲೀಯನು ಅದೆಲ್ಲವನ್ನೂ ಮಾಡಿದನು ಎಲೀಯನ ಸೇವಕನು (ಎಲೀಷನು) ಹಜಾಯೇಲನನ್ನು ಅಭಿಷೇಕಿಸಿದನು, ಇದು ಎಲೀಯನಿಂದ ಆತನಿಗೆ ನೇಮಿಸಿದ್ದಾಗಿತ್ತು. ಅದೇ ರೀತಿಯಲ್ಲಿಯೇ, ಎಲೀಷನ ಸೇವಕನು ನಂತರದಲ್ಲಿ ಯೇಹುವನ್ನು ನಾಯಕನನ್ನಾಗಿ ನೇಮಿಸಿದನು, ಇದು ಎಲೀಷನು ತಾನೇ ಮಾಡಿದ್ದಾನೋ ಎಂಬಂತಿತ್ತು. ತಿರುಗಿ, ಈ ರೀತಿಯಲ್ಲಿ ಎಲೀಯನು ಎಲೀಷನ ಮೂಲಕ

ಕಾರ್ಯಮಾಡಿದನು.

ಹೋರೇಬ ಬೆಟ್ಟದಲ್ಲಿ ಎಲೀಯನಿಗೆ ದೇವರು ಮಾಡಿದ ಪ್ರತಿಕ್ರಿಯೆಯತ್ತ ನಾವು ತಿರುಗುವಾ "ಹಜಾಯೇಲನ ಕತ್ತಿಗೆ ತಪ್ಪಿಸಿಕೊಂಡವರನ್ನು ಯೇಹುವು ಕೊಲ್ಲುವನು; ಯೇಹುವಿನ ಕತ್ತಿಗೆ ತಪ್ಪಿಸಿಕೊಂಡವರನ್ನು ಎಲೀಷನು ಕೊಲ್ಲುವನು" (1 ಅರಸು 19:17). ನಮ್ಮ ಅಧ್ಯಯನದ ಉದ್ದಕ್ಕೂ, ಹಜಾಯೇಲನ ಮತ್ತು ಯೇಹುವಿನ ರಕ್ತಮಯವಾದ ಕಾರ್ಯಗಳನ್ನು ನೋಡುತ್ತೇವೆ. ಅವರ ಕಾರ್ಯವು ಭೌತಿಕವಾಗಿರುವಾಗ, ಎಲೀಷನ ಸೇವೆಯು ಮೂಲತಹ ವಾಗಿ ಆತ್ಮೀಕವಾದವುಗಳು ಆಗಿದ್ದವು ಎಲೀಷನ ಪ್ರಮುಖ ಆಯುಧವಾದ ದೇವರ ವಾಕ್ಯ ವಾದಂತಹ ಆತ್ಮದ ಕತ್ತಿಯ ಮೂಲಕ ಅನೀತಿ ವಂತರವನ್ನು "ಮರಣಕ್ಕೆ" ಒಪ್ಪಿಸುವುದು ಆಗಿತ್ತು (ಎಫೆಸ 6:17; ನೋಡಿರಿ ಇಬ್ರಿಯ 4:12). ದೇವರ ವಾಕ್ಯವು ಅವಿಧೇಯರಿಗೆ ನ್ಯಾಯತೀರ್ಪನ್ನು ಸಾರುತ್ತದೆ.

ಎಲೀಯನು ನಾಲ್ಕನೆಯ ದೂರನ್ನು ಸಲ್ಲಿಸಿದನು: ಅದೇನೆಂದರೆ ಆತನಾನೊಬ್ಬನೇ ಉಳಿದಿದ್ದೇನೆ ಎಂದು. ಅದಕ್ಕೆ ದೇವರು ಆತನನ್ನು ಬಲಪಡಿಸುತ್ತಾ "ಬಾಳನ ವಿಗ್ರಹಕ್ಕೆ ಅಡ್ಡಬೀಳದೆಯೂ ಅದನ್ನು ಮುದ್ದಿಡದೆಯೂ ಇರುವ 7,000 ಮಂದಿ ಇಸ್ರಾಯೇಲ್ಯರು ಇದ್ದಾರೆ" (1 ಅರಸು 19:18) ಎಂದು ಹೇಳಿದನು. ಕರ್ತನ ಈ ಮಾತುಗಳು ಎಲೀಯನನ್ನು ಪುನಶ್ಚೇತನಗೊಳಿಸಿದವು. 19ನೇಯ ವಚನವು ಹೇಳುವುದೇನೆಂದರೆ, "ಎಲೀಯನು ಅಲ್ಲಿಂದ ಹೊರಟು ಹೋದನು ..." ಎಂದು. ಆತನು ಮತ್ತೇ ತಿರುಗಿ ಇಸ್ರಾಯೇಲಿನಲ್ಲಿ ದೇವರ ಮನುಷ್ಯನಾಗಿ ಉಳಿದುಕೊಂಡನು.

**ಸವಾಲು – ಪ್ರತಿಕ್ರಿಯೆ**

ಎಲೀಯನು ದೇವರ ಕೊನೆಯ ಆಜ್ಞೆಗೆ ಮೊದಲು ವಿಧೇಯನಾದನು (ವಚನ 16ಬಿ). ಆತನು ಫಲವತ್ತಾದ ಯೋರ್ದನ ಕೊಳ್ಳದಲ್ಲಿರುವ ಅಬೇಲ್ ಮೆಹೊಲವನ್ನು ಮುಟ್ಟುವತನಕ ಉತ್ತರಕ್ಕೆ 150 ಮೈಲಿ ಪ್ರಯಾಣಿಸಿದನು ("ಎಲೀಷನ ದಿನಗಳಲ್ಲಿ ಇಸ್ರಾಯೇಲು ಮತ್ತು ಸುತ್ತಲಿನ ರಾಜ್ಯಗಳನ್ನು" ತೋರಿಸುವ ನಕಾಶೆಯನ್ನು ಈ ಪಾಠದಲ್ಲಿ ಮತ್ತೊಂದು ಕಡೆ ನೋಡಿರಿ). ಆತನು "ಶಾಫಾಟನ ಮಗನಾದ ಎಲೀಷನನ್ನು ಕಾಣುವವರೆಗೆ" (ವಚನ 19ಬಿ) ಹುಡುಕಿದನು. ನಾವು ಎಲೀಷನ ಮೊದಲನೆಯ ಜೀವಿತದ ಬಗೆಗೆ ಅಲ್ಪವಾದದ್ದನ್ನು ತಿಳಿದಿದ್ದೇವೆ. ಹಾಗೆ ನೋಡಿದರೆ ಆತನ ಕುಟುಂಬವು ಬಾಳನ ಮುಂದೆ ಅಡ್ಡಬೀಳದ "7,000" ಜನರಲ್ಲಿ ಒಂದಾಗಿತ್ತು. ಆತನ ತಂದೆತಾಯಿ ಗಳು ಆತನಿಗೆ "ಎಲೀಷ" ಎಂದು ಹೆಸರಿಟ್ಟಿದ್ದರು. ಅದರ ಅರ್ಥ "ದೇವರು ನನ್ನ ರಕ್ಷಕನಾಗಿದ್ದಾನೆ" ಅಥವಾ "ನನ್ನ ದೇವರು ರಕ್ಷಿಸುತ್ತಾನೆ"[2] ಎಂದೇ ಆಗಿದೆ.

ಎಲೀಷನನ್ನು ಎಲೀಯನು ನೋಡಿದಾಗ ಆತನು ಉಳುತ್ತಿದ್ದನು" (ವಚನ 19ಸಿ). ಮೂರುವರೆ ವರ್ಷದ ಬರವು ಆಗ ತಾನೇ ಬಿಟ್ಟಿತ್ತು (1 ಅರಸು 17:1; 18:1, 2, 41-45; ನೋಡಿರಿ ಯಾಕೋಬ 5:17, 18), ಹೀಗೆ ಮೂರು ವರ್ಷಗಳಲ್ಲಿ ಅವರಿಗೆ ಇದು ಮೊದಲನೆಯ ಬೆಳೆ ಆಗಿತ್ತು! ಎಲೀಷನು "ಹನ್ನೆರಡು ಜೋಡಿ ಎತ್ತುಗಳನ್ನು ಹೊಂದಿದ್ದನು ಮತ್ತು ಆತನು ಹನ್ನೆರಡನೆಯ ಜೋಡಿ ಎತ್ತಿನಿಂದ ಊಳುತ್ತಿದ್ದನು" (1 ಅರಸು 19:19ಡಿ). ಈ ಪದಗಳು ಸೂಚಿಸುವುದೇನೆಂದರೆ, ಇನ್ನೊಂದು ರೀತಿಯಲ್ಲಿ ಎಲೀಷನು ಹನ್ನೊಂದು ಜನ ಉಳುವವರಿಗೆ ನಿರ್ದೇಶಿಸುತ್ತಿದ್ದನು. ಒಂದು ವೇಳೆ ಎಲೀಷನ ಕುಟುಂಬವು ಹನ್ನೆರಡು ಜೋಡಿ ಎತ್ತುಗಳನ್ನು ಹೊಂದಿತ್ತು - ಮತ್ತು ಸೇವಕರು ಅದನ್ನು ಬಳಸುತ್ತಿದ್ದರು. ಅಂದ ಮೇಲೆ ಅವರು ಶ್ರೀಮಂತ ರಾಗಿದ್ದರು ಎಂದು.

ಮುಂದೆ ಬರುವ ಆ "ಸಂದರ್ಶನವು" ಅಸಮಾನ್ಯವಾದುದ್ದು. ಎಲೀಯನು ಪ್ರತ್ಯಕ್ಷವಾಗಿ ಎಲೀಷನಿಗೆ ಏನೂ ಹೇಳಲಿಲ್ಲ. ಆತನು ಕೇವಲ ತಾನು ಹೋಗುವಾಗ "ತನ್ನ ಕಂಬಳಿಯನ್ನು

ಅವನ ಮೇಲೆ ಹಾಕಿದನು" (ವಚನ 19ಇ). ಎಲೀಯನ ಕಂಬಳಿಯು ಸರಳವಾದ ಹೊಸ ಉಡುಪಾಗಿಸಲು ಚರ್ಮ ಕೂದಲು ಅಥವಾ ಇತರ ಒರಟಾದ ವಸ್ತುಗಳಿಂದ ಮಾಡಿದ್ದಾಗಿತ್ತು. 2 ಅರಸು 2:8ರಲ್ಲಿ ಸೆಪ್ಟುಗೆಂಟ್ (ಹಳೆಯ ಒಡಂಬಡಿಕೆಯ ಗ್ರೀಕ್ ಭಾಷಾಂತರದಲ್ಲಿ), "ಕಂಬಳಿಯ" ಬದಲಾಗಿ "ಕುರಿಚರ್ಮ" ಎಂದಿದೆ. ಮೋಶೆಯು ಕೋಲನ್ನು ಬಳಸಿದ ಹಾಗೆ ಎಲೀಯನು ಕಂಬಳಿಯನ್ನು ಬಳಸಿದನು. ಕಂಬಳಿಯು ಎಲೀಯನ "ಆಫೀಸಿನ ಬ್ಯಾಡ್ಜ್‌ನಂತೆ" ಬಳಸಲ್ಪಡುತ್ತಿತ್ತು ಮತ್ತು ಅದ್ಭುತಗಳನ್ನು ಮಾಡುವಂತಹ ಆಯುಧವಾಗಿ ಬಳಸಲ್ಪಡುತ್ತಿತ್ತು.

ಈ ಸನ್ನಿವೇಶವನ್ನು ಊಹಿಸಿರಿ: ಒಂದು ದಿನ, ಎಲೀಷನು ಉಳುವಾಗ, ಕಾಡು ಮನುಷ್ಯನಂತಿರುವ ವೃದ್ಧ ಮನುಷ್ಯನು ಅಲ್ಲಿ ಕಾಣಿಸಿಕೊಂಡನು. ಆ ಮನುಷ್ಯನು ಆತನೆಡೆಗೆ ನೋಡಿದನು, ನಂತರ ಆತನ ದೇಹದಿಂದ ಬೆವರನ್ನು ಹೀರಿಕೊಂಡ, ಆತನ ಪ್ರಯಾಣಗಳ ಕಾಡುದಾರಿಯ ಧೂಳಿನಿಂದ ಕೂಡಿದ್ದ ಅದನ್ನು ರಾತ್ರಿಯಿಡಿ ಹೊದ್ದುಕೊಳ್ಳಲು ಬಳಸಲಾಗುತ್ತಿದ್ದ ಒರಟಾದ ಕಂಬಳಿಯನ್ನು ಆತನ ಭುಜದ ಸುತ್ತಲೂ ಇದ್ದ ಆತನ ಕಂಬಳಿಯನ್ನು ಎಳೆದನು. ಯಾವುದೆ ಮಾತಿಲ್ಲದೆ ಆತನು ಎಲೀಷನ ಭುಜದ ಸುತ್ತಲೂ ಕಂಬಳಿಯನ್ನು ಹಾಕಿದನು.

ಆ ರೀತಿಯ ವಿಚಿತ್ರವಾದ ಕೃತ್ಯಕ್ಕೆ ನಾನು ಹೇಗೆ ಪ್ರತಿಕ್ರಯಿಸುತ್ತಿದ್ದೇನೋ ನಾನರಿಯೆನು, ಆದರೆ ಎಲೀಷನು ಎಲೀಯನು ಮಾಡುತ್ತಿರುವ ಕಾರ್ಯದ ಮಹತ್ವದ ಬಗೆಗೆ ಅರಿತುಕೊಂಡನು. ಬಹುಶಃ ದೇವರು ಆತನಿಗೆ ದಿವ್ಯದೃಷ್ಟಿಯನ್ನು ಕೊಟ್ಟಿರಬಹುದು. ಹೆಚ್ಚಾಗಿ, ಎಲೀಷನು ಎಲೀಯನನ್ನೂ ಆತನ ಹೆಸರಾಂತ ಕಂಬಳಿಯನ್ನೂ ಬಲ್ಲವನಾಗಿದ್ದನು ಮತ್ತು ಆತನು ಸಹಜವಾಗಿಯೆ ಸೂಚನೆಯ ಅರ್ಥವನ್ನು ತಿಳಿದಿದ್ದನು. ವೃದ್ಧನಾದ ಪ್ರವಾದಿಯು "ನನ್ನನ್ನು ಹಿಂಬಾಲಿಸು, ಮತ್ತು ನೀನು ನನ್ನ ಕಂಬಳಿಯ ಅಡಿಯಲ್ಲಿ ಇರುವಂತೆಯೇ ನಿನ್ನನ್ನು ನಾನು ನನ್ನ ಅಡಿಯಲ್ಲಿ ರಕ್ಷಿಸುತ್ತೇನೆ." ನನ್ನ ಬದಲಿಗೆ ಬರುವಾತನನ್ನು ನಾನು ತರಬೇತುಗೊಳಿಸುವೆನು.

ಎಲೀಯನು ಎಲೀಷನ ಮೇಲೆ ಕಂಬಳಿಯನ್ನು ಹಾಕಿದ ಮೇಲೆ ಆತನು ದಾರಿ ಹಿಡಿದು ನಡೆದು ಹೋದನು. ಎಲೀಷನು ಶೀಘ್ರವೇ ಪ್ರತಿಕ್ರಯಿಸಿದನು. ಆತನ ಆತ್ಮವು ಬಹುಶಃ ರಾಷ್ಟ್ರವನ್ನು ತಿನ್ನುತ್ತಿರುವ ಆತ್ಮೀಕ ಹುಣ್ಣಿಗೆ ಅತ್ತಿರಬಹುದು. ಕೂಡಲೆ ಅವನು ಎತ್ತುಗಳನ್ನು ಬಿಟ್ಟು ಓಡುತ್ತಾ ಬಂದು ಎಲೀಯನಿಗೆ "ನನ್ನ ತಂದೆತಾಯಿಗಳನ್ನು ಮುದ್ದಿಟ್ಟು ಬರುವುದಕ್ಕೆ ಅಪ್ಪಣೆಯಾಗಲಿ ಅನಂತರ ಹಿಂಬಾಲಿಸುವೆನು" ಅಂದನು (ವಚನ 20ಎ). ಇನ್ನೊಂದು ಮಾತಿನಲ್ಲಿ "ನಾನು ಹೋಗಲು ಸಿದ್ಧನಿದ್ದೇನೆ, ಆದರೆ ನನ್ನ ಪೋಷಕರಿಗೆ ಹೋಗಿಬರುವೆನೆಂದು ಹೇಳಿಬರಲು ಒಂದು ನಿಮಿಷ ಕೊಡು" ಎಂಬಂತೆ ಇತ್ತು.

ಎಲೀಷನು ಆ ವಿನಂತಿಗಾಗಿ ಟೀಕೆಗೆ ಒಳಗಾಗಿರಬಹುದು. ಆತನು ತನ್ನ ಕೈಯನ್ನು ನೇಗಿಲ ಮೇಲೆ ಇಟ್ಟು "ಮತ್ತು ನಂತರ ಹಿದಕ್ಕೆ ನೋಡುವ" ಒಬ್ಬ ಶಿಷ್ಯನಿಗೆ ಹೋಲಿಸಲ್ಪಡುತ್ತಾನೆ (ಲೂಕ 9:61, 62). 1 ಅರಸು 19ರಲ್ಲಿ ಎಲೀಷನ ಮತ್ತು ಲೂಕ 9ರಲ್ಲಿನ ಶಿಷ್ಯನ ಹೃದಯದ ಮಧ್ಯದ ಭಿನ್ನತೆಯು ಇದರಲ್ಲಿ ಒಳಗೊಂಡಿದೆ ಲೂಕ 9:57-62ರಲ್ಲಿ ಇರುವಂತವರು ನೆವಗಳನ್ನು ಮಾಡುವಂತವರಾಗಿದ್ದಾರೆ. ಎಲೀಷನು ನೆವವನ್ನು ಮಾಡುತ್ತಿರಲಿಲ್ಲ; ಎಲೀಯನು ದೇವರ ಸೇವೆಯಲ್ಲಿರುವಂತೆಯೇ ಆತನನ್ನು ಅನುಸರಿಸಲು ತನ್ನ ಜೀವಿತವನ್ನು ಒಪ್ಪಿಸಿಕೊಡಲು ಸಿದ್ಧನಿದ್ದನು.

ಎಲೀಯನು ಅದಕ್ಕೆ "ಹೋಗು; ನಾನು ನಿನಗೆ ಮಾಡಿದ್ದೇನು?" (1 ಅರಸು 19:20ಬಿ) ಎಂದು ಪ್ರತಿಕ್ರಯಿಸಿದನು. ಈ ವಾಕ್ಯಗಳು ಅನೇಕ ಸಾರಿ ವ್ಯಾಖ್ಯಾನಿ ಸಲ್ಪಟ್ಟಿದೆ, ಆದರೆ ಎಲೀಯನು ಎಲೀಷನಿಗೆ ತನ್ನ ಸ್ನೇಹಿತರಿಗೆ ಬೀಳ್ಕೊಟ್ಟು ಬರುವುದಕ್ಕೆ ಅಪ್ಪಣೆಕೊಟ್ಟನು. "ನಾನು ನಿನಗೆ ಮಾಡಿದ್ದೇನು?" ಎಂದು ಕೇಳುವುದರ ಮೂಲಕ ಎಲೀಯನು "ನಾನು ನಿನ್ನನ್ನು ಪ್ರವಾದಿಯಾಗುವುದಕ್ಕಾಗಿ ಕರೆದೆನು, ಆದರೆ ಅದರ ಅರ್ಥ ನೀನು ನಿನ್ನ ಕುಟುಂಬದ

ಜೊತೆಗಿನ ಎಲ್ಲಾ ಬಂಧಗಳನ್ನು ಕಡಿದುಹಾಕು ಎಂದಲ್ಲಾ. ನೀನೇನು ಮಾಡುತ್ತಾ ಇದ್ದೀ ಎಂಬುದನ್ನು ಅವರಿಗೆ ಹೇಳು; ನಂತರ ನನ್ನೊಂದಿಗೆ ಬಾ" ಎಂದು ಹೇಳಿದನು.

> ಎಲೀಷನು ಹಿಂದಿರುಗಿ ಹೋಗಿ ತಾನು ಉಳುತ್ತಿದ್ದ ಜೋಡಿ ಎತ್ತುಗಳನ್ನು ತೆಗೆದುಕೊಂಡು ಅವುಗಳನ್ನು ವಧಿಸಿ ಮಾಂಸವನ್ನು ರೆಂಟೆಯ ಕಟ್ಟಿಗೆಯಿಂದ (ಕಟ್ಟಿಗೆಯ ನೊಗ ಮತ್ತು ಬಹುಶಃ ಕಟ್ಟಿಗೆ ರಂಟೆ) ಬೇಯಿಸಿ (ಬಲಿ ಸಮರ್ಪಣೆಯ ಸಮಯದಲ್ಲಿ ಉಪಯೋಗಿ ಸದಿರದ ಭಾಗವನ್ನು) ಜನರಿಗೆ ಔತಣಮಾಡಿಸಿದನು (ವಚನ 21ಎ).

ನಾನು ವಾಸಿಸುವಲ್ಲಿ, ನಾವು "ಎಲೀಷನು ತನ್ನ ಸೇತುವೆಗಳನ್ನು ಸುಟ್ಟುಹಾಕಿದನು" ಎಂದು ಹೇಳುತ್ತೇವೆ. ಆತನು ಇನ್ನು ರೈತನಲ್ಲ, ಆತನ ಜೀವಿತದ ಆ ಭಾಗವು ಮುಗಿದು ಹೋಯಿತು. ಆತನ ಬೀಳ್ಕೊಡುವ ಸಮಾರಂಭವು ಮುಗಿದ ಮೇಲೆ, "ಆನಂತರ ಅವನು ಎದ್ದು ಎಲೀಯನನ್ನು ಹಿಂಬಾಲಿಸಿದನು" (ವಚನ 21ಬಿ).

ಎಲೀಷನು ಎಲೀಯನೊಡನೆ ಕೆಲಸವನ್ನು ತಾನೇ ಹೊತ್ತುಕೊಳ್ಳುವುದಕ್ಕೆ ಸಿದ್ಧಮಾಡಿಕೊಳ್ಳುವುದಕ್ಕಾಗಿ ಮುಂದಿನ ಹತ್ತು ಅಥವಾ ಅದಕ್ಕಿಂತ ಹೆಚ್ಚು ವರುಷಗಳವರೆಗೆ ಪ್ರಯಾಣಿಸಿದನು. ನಾವು ಎಲೀಷನ ಬಗೆಗೆ 2 ಅರಸು 2ರ ತನಕ ಓದುವುದಿಲ್ಲ, ಆದರೆ ಎಲೀಷನು ಆತನು ಹೇಳಿದಂತವುಗಳನ್ನು ಮಾಡುವವನಾಗಿದ್ದನು ಎಂಬುದಕ್ಕೆ ಇರುವ ಕೆಲ ವಿವರಗಳು ಇದನ್ನು ನಂಬುವುದಿಲ್ಲ, ಆದರೆ ಎಲೀಷನು ಆತನು ಹೇಳಿದಂತವುಗಳನ್ನು ಮಾಡುವವನಾಗಿದ್ದನು ಎಂಬುದಕ್ಕೆ ಇರುವ ಕೆಲ ವಿವರಗಳು ಇದನ್ನು ನಂಬುವತ್ತ ನಡೆಸವವುಗಳಾಗಿವೆ ಅವುಗಳು, "ನಾನು ನಿನ್ನನ್ನು ಹಿಂಬಾಲಿಸುವೆನು" (ವಚನ 20; ನೋಡಿರಿ 2 ಅರಸು 2:2). 1 ಅರಸು 20-2 ಅರಸು 1ರಲ್ಲಿ ನಾವು ನೋಡುವಂತೆ ಎಲೀಯನು ಎಲೀಷನೆಡೆಗೆ ಇಂಥ ನಾಟಕೀಯ ದೃಷ್ಯಗಳ ಆರಂಭದಲ್ಲಿ ಇದ್ದನು ಎಂಬುದನ್ನು ಚಿತ್ರಿಸುವುದಾಗಿವೆ:

- ಎಲೀಯನು ಅರಸನಾದ ಆಹಾಬನು ನಾಬೋತನ ದ್ರಾಕ್ಷೆತೋಟದಲ್ಲಿ ಇದ್ದಾಗ ಆತನನ್ನು ಎದುರಿಸುತ್ತಿದ್ದದ್ದು (1 ಅರಸು 21).
- ಎಲೀಯನು ಅಹಜ್ಯನು ಕಳುಹಿಸಿಕೊಟ್ಟ ಸೈನ್ಯವನ್ನು ಎದುರಿಸುವಂತಹದ್ದು (2 ಅರಸು 1).

ಎಲೀಯನು "ಜೊತೆ ಪ್ರವಾದಿಯಾಗಿ" ಅಥವಾ "ಎರಡನೆಯ ಹಂತದಲ್ಲಿರುವಂತ ಪ್ರವಾದಿ" ಎಂಬಂತೆ ಎಲೀಷನೊಡನೆ ಪ್ರಯಾಣಿಸಿರಲಿಲ್ಲ. 1 ಅರಸು 19:21ರ ಪ್ರಕಾರ ಎಲೀಷನು ಎಲೀಯನೊಡನೆ "ಸೇವೆ" ಮಾಡಿದನು. ಎಲೀಷನು ಒಬ್ಬ *ಸೇವಕನಂತೆ* ಪ್ರಯಾಣಿಸಿದನು. ಆತನು ಎಲೀಯನಿಗಾಗಿ ಏನು ಮಾಡಿದನು? 2 ಅರಸು 3:11ರಲ್ಲಿ ಎಲೀಷನು ಎಲೀಯನ ಕೈಗೆ ನೀರು ಹಾಕುವಂತಹ ಅತೀ ಕೆಳಮಟ್ಟದ ಸೇವಕ ಕಾರ್ಯ ಮಾಡುವವನು ಎಂದು ವರ್ಣಿಸಲ್ಪಟ್ಟಿದ್ದಾನೆ.

ಆ ಹತ್ತು ವರ್ಷಗಳ ಆರಂಭದಲ್ಲಿ, ಎಲೀಷನು ಕೆಲಸದ ತರಬೇತಿಯನ್ನು ಪಡೆದನು. ನಂತರ ಪ್ರವಾದಿಯ ಮಂಡಲಿಯವರು "ಎಲೀಯನ ಆತ್ಮವು ಎಲೀಷನ ಮೇಲೆ ಬಂದಿದೆ" (2 ಅರಸು 2:15) ಎಂದು ಹೇಳಿದರು. ಹೇಗೋ, ಎಲೀಷನು ಬಹುದಿನದ ಹಿಂದೆ ಎಲೀಯನ ಕಂಬಳಿಯನ್ನು ಎತ್ತಿಕೊಂಡು ಯೋರ್ಧನ್ ಹೊಳೆಯನ್ನು ಹೊಡೆದಂದಿನಿಂದ ಆತನ ಆತ್ಮವನ್ನು ಹೊಂದಿಕೊಂಡ ಕಾರ್ಯವನ್ನು ಆರಂಭಿಸಿದನು. ಆತನು ಎಲೀಯನ ಆತ್ಮದಲ್ಲಿ ಪಾಲು ತೆಗೆದುಕೊಂಡವನು ಮತ್ತು ಪ್ರವಾದಿ ಯೊಡನೆ ಬಯಲಲ್ಲಿ ಕೊರೆಯುವ ಚಳಿಯಲ್ಲಿ ರಾತ್ರಿಯನ್ನು ಬಹುಕಾಲಕಳೆದವನೂ ಆಗಿದ್ದನು. ಉತ್ತರದ ರಾಜ್ಯದ ಧೂಳಿನ ದಾರಿಯಲ್ಲಿ ಎಲೀಯನೊಡನೆ ನಡೆಯುತ್ತಾ ಒಬ್ಬ ಪ್ರವಾದಿಯಲ್ಲಿ ಏನೇನು ಇರಬೇಕು ಎಂಬುದನ್ನು

ಕಲಿತನು.

## ದೇವರು ಮಾನ್ಯ ಮಾಡಿದ ಮನುಷ್ಯರು (2 ಅರಸು 2:1-18)

**ವೃದ್ಧನಾದ ಪ್ರವಾದಿಯು ಮನೆಗೆ ಹೋಗುವುದು**

"ಎಲೀಯನನ್ನು ಸುಳಿಗಾಳಿಯ ಮುಖಾಂತರವಾಗಿ ಪರಲೋಕಕ್ಕೆ ತೆಗೆದುಕೊಂಡು ಹೋಗುವ" (2 ಅರಸು 2:1ಎ) ಸಮಯವು ಅಂತಿಮವಾಗಿ ಯೆಹೋವನಿಂದ ಬಂದಿತು ಗೊತ್ತು ಪಡಿಸಲಾದ ದಿನ, ಎಲೀಯನು ಗಿಲ್ಗಾಲಿನಿಂದ ಬೇತೇಲಿಗೆ ಅಲ್ಲಿಂದ ಯೆರಿಕೋವಿಗೆ ಪ್ರಯಾಣಿಸಿದನು (ವಚನಗಳು 1, 2, 4) ಈ ಸ್ಥಳಗಳು ಯೆಹೂದಿ ಇತಿಹಾಸದಲ್ಲಿ ಸ್ಮರಣೀಯ ಸ್ಥಳಗಳಾಗಿವೆ, ಆದರೆ ಪ್ರವಾದಿಯು ಈ "ಸ್ಮರಣೀಯ ಪ್ರದೇಶಗಳಿಂದ" ಪ್ರಯಾಣವನ್ನು ಕೈಕೊಳ್ಳಲಿಲ್ಲ. "ಈ ಪ್ರತಿಯೊಂದು ಸ್ಥಳಗಳಲ್ಲಿ ಪ್ರವಾದಿ ಮಂಡಲಿಗಳಿದ್ದವು" (ನೋಡಿರಿ ವಚನಗಳು 3, 5; 4:38). ಬಹುಶಃ ಎಲೀಯನಿಗೆ ಪ್ರವಾದಿ ಮಂಡಲಿಯವರನ್ನು ಭೇಟಿ ಯಾಗಬೇಕಿತ್ತು ಮತ್ತು ಕಷ್ಟದ ಸಮಯದಲ್ಲಿ ನಂಬಿಕೆಯನ್ನು ಉಳಿಸಿಕೊಳ್ಳುವಂತೆ ಅವರಿಗೆ ಅಂತಿಮವಾಗಿ ಒಪ್ಪಿಸಿಕೊಡಬೇಕಿತ್ತು.

ಈ ಶಾಲೆಯಲ್ಲಿ ಕಲಿಯುವವರು "ಪ್ರವಾದಿಗಳ ಮಕ್ಕಳು" ಎಂದು ಕರೆಯಲ್ಪಡುತ್ತಿದ್ದರು (2:3, 5, 7, 15). "ಪ್ರವಾದಿಗಳ ಮಕ್ಕಳು" ಅಂದರೆ ಅವರ ತಂದೆಗಳು ಪ್ರವಾದಿಗಳಾಗಿ ರುತ್ತಿದ್ದರು ಎಂದಲ್ಲ. "ಮಕ್ಕಳು" ಎಂಬುದು ಹೆಬ್ರಾಯಿಸಮ್ ಆಗಿದ್ದು ಇದರ ಅರ್ಥವು "ಗುಣಲಕ್ಷಣಗಳ ಪಾಲು ತೆಗೆದುಕೊಳ್ಳುವಿಕೆ" ಎಂದಾಗಿದೆ ಈ ಜನರು ಪ್ರವಾದಿ - ತರಬೇತಿ ಪಡೆಯುವವರು ಆಗಿದ್ದಾರೆ. ಒಂದು ಸಂಪ್ರದಾಯದ ಪ್ರಕಾರ, ಎಲೀಯನು ಈ ತರಬೇತು ಕೊಡುವ ಕಾರ್ಯಕ್ರಮವನ್ನು ಪ್ರಾರಂಭಿಸಿದನು. ಎಲೀಷನು ಈ ಶಾಲೆಗಳೊಂದಿಗೆ ತನ್ನ ಸೇವೆಯುದ್ಧಕ್ಕೂ ಸಂಬಂಧವನ್ನು ಕಾಯ್ದುಕೊಂಡು ಬಂದಿದ್ದನು.

ಎಲೀಯನ ಕೊನೆಯ ದಿನದಂದು, ಆತನು ಮುಂದಿನ ಸ್ಥಳಕ್ಕೆ ಹೋಗುವ ಮುಂಚೆ ಪ್ರತಿ ಸಾರಿ ಎಲೀಷನಿಗೆ "ದಯವಿಟ್ಟು ಇಲ್ಲೇ ಇರು; ಯೆಹೋವನು ನನಗೆ (ಹೋಗ ಬೇಕಾದ ಸ್ಥಳದ ಹೆಸರು ಹೇಳಿ) ಹೋಗಬೇಕೆಂದು ಆಜ್ಞಾಪಿಸಿದ್ದಾನೆ" ಎಂದು ಹೇಳುತ್ತಿ ದ್ದನು (ವಚನ 2; ನೋಡಿರಿ 4, 6). ಎಲೀಯನು ತಾನು ಒಬ್ಬಂಟಿಗನಾಗಿ ಹೋಗಲು ಬಯಸುತ್ತಿರಬಹುದು, ಆದರೆ ಬಹುವಾಗಿ ಆತನ ಮಾತುಗಳು ಅದನ್ನು ಪರೀಕ್ಷೆ ಎಂಬಂತೆ ಸೂಚಿಸುವವಗಳಾಗಿವೆ (ರೂತ 1:11-13 ರೊಂದಿಗೆ ಹೋಲಿಸಿರಿ). ಎಲೀಯನು ಎಲೀಷನನ್ನು ತನ್ನ ಮೂಲ ಒಡಂಬಡಿಕೆಯಿಂದ ಬಿಡುಗಡೆ ಮಾಡಬೇಕೆಂದು ಬಯಸಿದ್ದನೇನೋ? ಬಹುಶಃ ಆತನು ಹೀಗೆ ಹೇಳಿರಬಹುದು: "ನೀನು ನಿನ್ನ ಮೂಲಕ ಹೊಣೆಯನ್ನು ಹೊತ್ತಿಕೊಳ್ಳಬಹುದೆಂದು ನಿರ್ಣಯಿಸಬಲ್ಲೆಯಾ? ಒಂದು ವೇಳೆ ನೀನು ಅದನ್ನು ಮಾಡಿದ್ದಾದರೆ ನನಗೆ ತಲೆನೋವು ಆಗುತ್ತದೆ." ಎಲೀಯನ ಉದ್ದೇಶವು ಏನೇ ಇರಲಿ, ಎಲೀಷನು ಪ್ರತಿ ಸಾರಿಯೂ ಎದೆಗುಂದುವದನ್ನು ಎದುರಿಸುವವನಾಗಿದ್ದನು. ಪ್ರತಿಸಾರಿ ಆತನು "ಯೆಹೋವನಾಣೆ, ನಿನ್ನ ಜೀವದಾಣೆ, ನಾನು ನಿನ್ನನ್ನು ಬಿಟ್ಟುಹೋಗುವದಿಲ್ಲ" ಎಂದು ಉತ್ತರಕೊಡುತ್ತಿದ್ದನು (2 ಅರಸು 2:2, 4, 6).

ಅಂತಿಮವಾಗಿ, ಯೆಹೋವನು ಎಲೀಯನನ್ನು ಯೋರ್ದನ ಹೊಳೆಗೆ ಕಳುಹಿಸಿದನು (ವಚನಗಳು 6, 7). ಎಲೀಯ ಮತ್ತು ಎಲೀಷರು ಸ್ವಲ್ಪ ಅಂತರದಲ್ಲಿರುವಾಗ ಐವತ್ತು ಜನ ಪ್ರವ ಾದಿಮಂಡಲಿಯವರು ಇವರನ್ನು ನೋಡುತ್ತಾ ನಿಂತಿದ್ದರು (ವಚನ 7). "ಆನಂತರ ಎಲೀಯನು ತನ್ನ ಕಂಬಳಿಯನ್ನು ಮಡಚಿ ಅದರಿಂದ ನೀರನ್ನು ಹೊಡೆದನು" (ವಚನ 8ಎ). ಹೇಗೆಂದರ ೆ ಮೋಶೆಯು ತನ್ನ ಕೋಲನ್ನು ಕೆಂಪು ಸಮುದ್ರದ ಮೇಲೆ ಚಾಚಿದ ಹಾಗೆಯೇ (ವಿಮೋ ಚನಕಾಂಡ 14:16, 21) ಮಾಡಿದನು. ತಕ್ಷಣವೆ "ನೀರು ಎರಡು ಭಾಗವಾಯಿತು; ಇಬ್ಬರೂ

ಒಣ ನೆಲದ ಮೇಲೆ ದಾಟಿಹೋದರು'' (2 ಅರಸು 2:8ಬಿ) - ಈ ಮುಂಚೆ ಯೆಹೋಶುವ ಮತ್ತವನ ಜನರು ಯೋರ್ದನ ಹೊಳೆಯನ್ನು ದಾಟಿದಂತೆಯೆ (ಯೆಹೋಶುವ 3:14-17).

ಹೊಳೆಯ ಪೂರ್ವಭಾಗಕ್ಕೆ ಬಂದಾಗ, ಎಲೀಯನು ಎಲೀಷನಿಗೆ "ನಿನ್ನನ್ನು ಬಿಟ್ಟು ಹೋಗುವ ಮೊದಲು ನಾನು ನಿನಗೋಸ್ಕರ ಏನು ಮಾಡಬೇಕೆನ್ನುತ್ತೀ ಹೇಳು'' ಎಂದು ಕೇಳಿದನು (2 ಅರಸು 2:9ಎ). ಎಲೀಷನು ಅನೇಕ ಸಂಗತಿಗಳನ್ನು ಕೇಳಬಹುದಿತ್ತು. ಆದರೆ ಆತನು, "ನಿನಗಿರುವ ಆತ್ಮದಲ್ಲಿ ನನಗೆ ಎರಡು ಪಾಲನ್ನು ಅನುಗ್ರಹಿಸು'' ಎಂದು ಬೇಡಿ ಕೊಂಡನು (ವಚನ 9ಬಿ). ಎಲೀಯನು ತನ್ನ ಧೈರ್ಯದ ನಂಬಿಕೆಯ, ವಿಧೇಯತೆಯ ದೃಢ ನಿರ್ಧಾರ, ಪಕ್ಷಪಾತವಿಲ್ಲದ ನ್ಯಾಯತೀರ್ಪು ಮತ್ತು ಅದಕ್ಕಿಂತ ಹೆಚ್ಚಿನದಾಗಿ ತನ್ನ ದೇವರಿಗೆ ಪ್ರಾಮಾಣಿಕತೆಯ ದೃಢಸಂಕಲ್ಪವನ್ನು ಇರಿಸಿಕೊಂಡಿದ್ದಂತಹ - ಪರಿಣಾಮಗಳ ಬಗೆಗೆ ಯೋಚಿಸದ ಆತ್ಮವನ್ನು ತೋರಿಸಿ ಕೊಂಡಿದ್ದನು. ಅಂತೆಯೇ ಎಲೀಷನು "ನಿನಗಿರುವ ಆತ್ಮದಲ್ಲಿ ನನಗೆ ಎರಡು ಪಾಲನ್ನು ಅನುಗ್ರಹಿಸು'' ಎಂದು ಕೇಳಿದನು!

"ಎರಡು ಪಾಲನ್ನು'' ಎಂಬ ಪದವು ಆಶ್ಚರ್ಯಯುತವಾದದ್ದಾಗಿದೆ. ಎಲೀಷನು ಆತನು ಒಳ್ಳೆಯ ಮತ್ತು ಶಕ್ತಿಯುತವಾದ ಗುರುವಾಗಿರುವಂತೆ ಕೇಳಿಕೊಂಡಿದ್ದರ ಬಗೆಗೆ ಯಾವ ಸೂಚನೆಯೂ ಇಲ್ಲ. ಆತನು ಬಹುಶಃ ತಾನು ಎಲೀಷನ ಆತ್ಮೀಕ ವಾರ ಸುದಾರನಾಗಿರಬೇಕೆಂದು ತಾನು ಹೊಂದಿದ್ದ ಇಚ್ಛೆಯನ್ನು ವ್ಯಕ್ತಪಡಿಸಿದನು. ಯೆಹೂದಿ ಧರ್ಮಶಾಸ್ತ್ರದ ಪ್ರಕಾರ, "ಎರಡು ಪಾಲು'' ಹಿರಿಯಮಗನ ಸ್ವತ್ತಾಗಿದೆ (ಧರ್ಮೋಪದೇಶ ಕಾಂಡ 21:17). ಆ ಮಗನು ತನ್ನ ತಂದೆಯ ಹೆಸರನ್ನು ಮತ್ತು ಆತನ ಕಾರ್ಯವನ್ನು ಹೊತ್ತುಕೊಳ್ಳುವ ಜವಾಬ್ದಾರನಾಗಿರುತ್ತಾನೆ.

ಎಲೀಯನು ಆತನಿಗೆ "ನೀನು ದುರ್ಲಭವಾದದ್ದನ್ನು ಕೇಳಿಕೊಂಡಿ'' (2 ಅರಸು 10ಎ) ಎಂದು ಉತ್ತರಿಸಿದನು. ಆತನು ಅವನಿಗೆ "ನಾನು ನಿನಗೇನು ಮಾಡಬಹುದೋ ಕೇಳು'' ಎಂದು ಹೇಳಿದನು, ಮತ್ತು ಎಲೀಷನು ಆತನಿಗೆ ಅನುಗ್ರಹಿಸಿದ ವರವನ್ನು ಮಾತ್ರ ಕೇಳಿದನು. ಆದರೆ ಎಲೀಷನ ಬಿನ್ನಹವು ದಯಪಾಲಿಸಲಾಯಿತು - ಆದರೆ ಅದಕ್ಕೆ ಒಂದು ಶರತ್ತು ಇತ್ತು. "ಆದರೂ ನಾನು ನಿನ್ನ ಬಳಿಯಿಂದ ತೆಗೆಯಲ್ಪಡುವಾಗ ನೀನು ನನ್ನನ್ನು ನೋಡುವುದಾದರೆ ಅದು ದೊರಕುವದು; ಇಲ್ಲವಾದರೆ ದೊರಕುವುದಿಲ್ಲ'' (ವಚನ 10ಬಿ). ಹತ್ತು ವರ್ಷಗಳ ಮುಂಚೆ ದೇವರು ಎಲೀಷನನ್ನು ಎಲೀಯನ ಬದಲಾಗಿ ಆರಿಸಿಕೊಂಡಿದ್ದನು (1 ಅರಸು 19:16). ಹೇಗೋ, ಎಲೀಷನು ಎಲೀಯನನ್ನು ಹಿಂಬಾಲಿಸುವ ಹೊಣೆಯಲ್ಲಿ ಸ್ಥಿರವಾಗಿ ಇದ್ದಾಗ ಮಾತ್ರ ಇದು ಸಂಭವಿಸುತ್ತಿತ್ತು (ವಚನಗಳು 20, 21). ಆತನು ಕೊನೆಯವರೆಗೂ ಅವನೊಡನೆಯೆ ಇದ್ದನು.

ಎಲೀಯ ಮತ್ತು ಎಲೀಷರು ಯೋರ್ದನಿನ ಪೂರ್ವಕ್ಕೆ ಹೋದರು. ತಕ್ಷಣವೇ, "ಪಕ್ಕನೆ ಅಗ್ನಿಮಯವಾದ ರಥರಥಾಶ್ವಗಳು ನಡುವೆ ಬಂದವು'' (2 ಅರಸು 2:11ಬಿ). ಇದು ಪರಲೋಕದ ಕುದುರೆಗಳನ್ನು ಚಿತ್ರಿಸುವ ಸರಳವಾದ ಮಾರ್ಗವಾಗಿದೆ (ನೋಡಿರಿ 2 ಅರಸು 6:17; ಕೀರ್ತನೆ 104:4). ದೇವದೂತರು ಎಲೀಯನನ್ನು ಮನೆಗೆ ಕರೆದೊಯ್ಯಲು ಬಂದರು (ಲೂಕ 16:22ನ್ನು ನೋಡಿರಿ)! ರಥಗಳು ಮತ್ತು ಕುದುರೆಗಳು ಅವರನ್ನು ಬೇರೆ ಮಾಡಿದವು (2 ಅರಸು 2:11ಬಿ). ದಿವ್ಯವಾದ ಗಾಳಿಯು ಸುಳಿಗಾಳಿಯಾಯಿತು ಮತ್ತು ಬೀಸಿತು, ಆದರೆ ತಿರುಗುತಿರುವ ಧೂಳಿನಲ್ಲಿಯೂ, ಎಲೀಷನು ಇನ್ನೂ ತನ್ನ ಒಡೆಯನನ್ನು ನೋಡುತ್ತಿದ್ದಾನೆ (ವಚನ 12ಎ). "ನಂತರ ಎಲೀಯನು ಸುಳಿಗಾಳಿಯ ಮೂಲಕ ಪರಲೋಕಕ್ಕೆ ಹೋದನು'' (ವಚನ 11ಸಿ).

ಆಗ ಎಲೀಷನು "ನನ್ನ ತಂದೆಯೇ, ನನ್ನ ತಂದೆಯೇ ಇಸ್ರಾಯೇಲ್ಯರಿಗೆ ರಥಾರಥಾಶ್ವಗಳಾಗಿದ್ದವನೇ ಎಂದು ಕೂಗಿದನು'' (ವಚನ 12ಬಿ). ಆತನ ಮತುಗಳು ಪರಲೋಕದ ಸೈನ್ಯವನ್ನು ಸೂಚಿಸುವಂತವುಗಳಾಗಿರಲಿಲ್ಲ ಆದರೆ ಎಲೀಯನನ್ನೇ (2 ಅರಸು 13:14 ರೊಂದಿಗೆ ಹೋಲಿಸಿರಿ) "ಎಲೀಯನನ್ನು ದೇವರ ಒಬ್ಬನೇ ಸೇನೆಯೂ, ಅದ್ಭುತವಾದ

ಹೋರಾಟಗಾರನಾದ ನಿಜ ಇಸ್ರಾಯೇಲನೂ ಮತ್ತು ... ಬಡಾಯಿ ಕೊಚ್ಚಿಕೊಳ್ಳುವ ಸೇನೆಯ ಸೈನಿಕರೆಲ್ಲರಿಗಿಂತಲೂ ಅತನೂ ಹೆಚ್ಚಿನವನೂ ಆಗಿದ್ದನು."[3]

ಎಲೀಷನನು ಆತನ ಮೇಲುಡುಪಿನ ಅಂಚನ್ನು ಎರಡೂ ಕೈಗಳಿಂದ ಎರಡು ತುಂಡುಗಳನ್ನಾಗಿ ಹರಿದನು, ಇದು ದೊಡ್ಡ ದುಃಖದ ಸೂಚನೆಯಾಗಿದೆ (2:12ಡಿ; ನೋಡಿರಿ ಆದಿಕಾಂಡ 37:29; 2 ಸಮುವೇಲ 13:19; ಯೋಬ 1:20; 2:12). ಆತನು ಮಗುವಿನಂತೆ ಅತ್ತನು, ಯಾಕೆಂದರೆ ಆತನ ಆತ್ಮೀಕ ತಂದೆಯು ಅವನಿಂದ ತೆಗೆದುಕೊಳ್ಳಲ್ಪಟ್ಟಿದ್ದನು. ದೇಶಪ್ರೇಮಿಯೊಬ್ಬನು ಗೋಳಾಡಿದಂತೆ ಗೋಳಾಡಿದನು.[4]

**ಒಬ್ಬ ಹೊಸ ಪ್ರವಾದಿಯು ಕೆಲಸಕ್ಕೆ ಹೊರಟಿದ್ದು**

ಎಲೀಷನು ಎಲೀಯನು ಇದ್ದಂಥಹ ಸ್ಥಳವನ್ನು ನೋಡಿದ್ದನು. ಪ್ರವಾದಿಯ ಕಂಬಳಿಯು ನೆಲದ ಮೇಲೆ ಬಿತ್ತು. ತನಗೆ ಸೇರಿರುವ ಪ್ರತಿಯೊಂದನ್ನು ಎಲೀಯನು ಹೋಗುವ ಮುನ್ನ ತೆಗೆದುಕೊಂಡು ಹೋದನು - ಆದರೆ ತನ್ನ ಕಂಬಳಿಯನ್ನು ಬಿಟ್ಟಿದ್ದನು. ಎಲೀಷನು ಕಂಬಳಿಯನ್ನು ತೆಗೆದುಕೊಂಡು ಯೋರ್ದನ ತೀರಕ್ಕೆ ಹೋದನು (2 ಅರಸು 2:13). ಎಲೀಯನ ಕೊನೆಯ ಅದ್ಭುತವು ಆತನ ಮೊದಲ ಅದು ಅದ್ಭುತವಾಗಿತ್ತು.

ಎಲೀಷನು ಮಣ್ಣಿನ ಬುಗ್ಗೆಯ ಹತ್ತಿರ ತಲುಪಿದಾಗ[5] ತನ್ನ ಕಂಬಳಿಯನ್ನು ಮಡಚಿದನು ಮತ್ತು "ಎಲೀಯನ ದೇವರಾದ ಯೆಹೋವನೆಲ್ಲಿ?" (ವಚನ 14ಎ) ಎಂದು ಕೂಗುತ್ತಾ ನೀರನ್ನು ಹೊಡೆದನು. ಎಲೀಷನು ದೇವರ ಅಸ್ತಿತ್ವದ ಬಗೆಗೆ ಸಂಶಯವನ್ನು ವ್ಯಕ್ತಪಡಿಸುತ್ತಿಲ್ಲ. ಆತನು "ಕರ್ತನೇ ನೀನು ಇಲ್ಲಿದ್ದೀಯಾ? ಎರಡು ಪಾಲನ್ನು ನಾನು ಹೊಂದಿಕೊಂಡಿದ್ದೇನೋ ಅಥವಾ ಇಲ್ಲವೋ? ನದಿಯ ನೀರು ಎಲೀಯನಿಗಾದಂತೆ ನನಗಾಗಿ ವಿಭಾಗವಾಗುತ್ತದೆಯೋ ಇಲ್ಲವೋ?" ಎಂದು ಕೇಳುತ್ತಿದ್ದಾನೆ.

ಅದು ಹಾಗೆ ಆಯಿತು! "ಆ ಕಂಬಳಿಯಿಂದ ನೀರನ್ನು ಹೊಡೆಯಲು ಅದು ಎರಡು ಭಾಗವಾಯಿತು; ಅವನು ಹೊಳೆಯನ್ನು ದಾಟಿಹೋದನು" (ವಚನ 14ಬಿ). ಹೌದು, ದೇವರು ಇನ್ನೂ ಉಪಸ್ಥಿತನಿದ್ದಾನೆ ಮತ್ತು ಶಕ್ತಿಯುತನಾಗಿದ್ದಾನೆ ಈಗ ಆತನು ಎಲೀಷನಲ್ಲಿ ಕಾರ್ಯೋನ್ಮುಖನಾಗಿದ್ದಾನೆ. ದೇವರ ಶ್ರೇಷ್ಟ ಯೋಧನ ಸಾವಿನ ಅರ್ಥವು ದೇವರು ಸತ್ತಿದ್ದಾನೆ ಎಂದಲ್ಲ, ಕೇವಲ ಆತನ ಸೇವಕನು ಮರಣ ಹೊಂದಿದನು ಎಂದರ್ಥವಾಗಿದೆ ಕಂಬಳಿಯನ್ನು ಎತ್ತಿಕೊಂಡು ಹೋಗಲು ಸಿದ್ಧವಾದ ಸ್ತ್ರೀಪುರುಷರು ಇರುವವರೆಗೂ, ದೇವರು ತನ್ನ ಕೆಲಸವನ್ನು ನಿರಂತರವಾಗಿ ನಡೆಸುತ್ತಿರುತ್ತಾನೆ!

ಪ್ರವಾದಿ ಮಂಡಲಿಯವರು ನೋಡುತ್ತಲೇ ಇದ್ದರು (ವಚನ 7). ಏನು ಸಂಭವಿಸುವದು ಎಂಬುದರ ಬಗೆಗೆ ಅವರಿಗೆ ಯಾವ ಖಚಿತತೆ ಇರಲಿಲ್ಲ ಹೇಗೋ, ಯೋರ್ದನ ಹೊಳೆಯು ಎಲೀಯನಿಗಾಗಿ ಎರಡು ಭಾಗವಾಗುವುದನ್ನು ಆತನು ಪೂರ್ವಕ್ಕೆ ಹೋಗುವುದನ್ನೂ ಅವರು ನೋಡಿದ್ದರು ಮತ್ತು ಈಗ ಎಲೀಷನು ಪಶ್ಚಿಮಕ್ಕೆ ಹೊರಟಾಗ ಅದು ಭಾಗವಾಯಿತು. ಅವರು ಒಂದೇ ಒಂದು ಸಮಾರೋಪಕ್ಕೆ ಬಂದರು ಅದು "ಎಲೀಯನಿಗಿದ್ದ ಆತ್ಮವು ಎಲೀಷನ ಮೇಲೆ ಬಂತು" ಎಂದುಕೊಂಡರು (ವಚನ 15ಎ). ಎಲೀಷನು ಎಲೀಯನ ವಾರಸುದಾರ ಎಂದು ದೈವಿಕವಾಗಿ ನೇಮಕ ಗೊಂಡಿದ್ದನು. ಅವರು ತಮ್ಮ ನಾಯಕನನ್ನು ನೋಡಲು ಓಡಿಹೋದರು ಮತ್ತು ಆತನ ಮುಂದೆ ಬೊಗ್ಗಿದರು (ವಚನ 15ಬಿ).

ಎಲೀಯನಿಗೆ ಏನು ಸಂಭವಿಸಿತೆಂಬುದರ ಬಗೆಗೆ ಅವರು ಇನ್ನೂ ಗಲಿಬಿಲಿಗೊಳ ಗಾಗಿದ್ದರು. ರಹಸ್ಯವಾಗಿ ಇರುವುದರಲ್ಲಿ ಮತ್ತು ಕರ್ತನ ಆತ್ಮನಿಂದಲೂ ಹಿಂದಿನ ಪ್ರವಾದಿಯ ಪ್ರಖ್ಯಾತಿಯನ್ನು ಹೊಂದಿದ್ದನು (1 ಅರಸು 18:12; ಅಪೊಸ್ತಲರ ಕೃತ್ಯಗಳು 8:39, 40 ಹೋಲಿಸಿರಿ). ಅವರು ಎಲೀಷನಿಗೆ "ನಿನ್ನ ಸೇವಕರಾದ ನಮ್ಮಲ್ಲಿ ಐವತ್ತು ಮಂದಿ ಬಲಿಷ್ಟ ಜನರಿದ್ದಾರೆ; ನಿನ್ನ ಯಜಮಾನನನ್ನು ಹುಡುಕಹೋಗುವುದಕ್ಕೆ ಅವರಿಗೆ ಅಪ್ಪಣೆಯಾಗಲಿ.

ಯೆಹೋವನ ಆತ್ಮವು ಅವನನ್ನು ಎತ್ತಿಕೊಂಡು ಹೋಗಿ ಒಂದು ಬೆಟ್ಟದ ಮೇಲಾಗಲಿ ತಗ್ಗಿನಲ್ಲಾಗಲಿ ಇಟ್ಟಿರಬಹುದು'' (2 ಅರಸು 16ಎ) ಎಂದು ಹೇಳಿದರು. ಎಲೀಯನನ್ನು ಹುಡುಕುವದು ಕಾಲಹರಣದ ವಿಷಯ ಎಂದು ಎಲೀಷನು ಬಲ್ಲವನಾಗಿದ್ದನು. ಮೊದಲು ಆತನು "ನೀವು ಕಳುಹಿಸಬೇಡಿರಿ ಅಂದನು'' (ವಚನ 16ಎ). ಆದರೆ ಅವರು ಆತನು ಹಾಗೆ ಮಾಡುವವರೆಗೂ ಒತ್ತಾಯಿಸುತ್ತಲೇ ಹೋದರು (ವಚನ 17ಎ). ಅವರು ಆತನನ್ನು ಅಂಗೀಕರಿಸುವಂತೆ ಮಾಡಿದರು ಎಂದು ನಾವು ಹೇಳಬಹುದು.

ಅವರು ಮೂರು ದಿನಗಳವರೆಗೆ ಹುಡುಕಿದರು (ವಚನ 17ಬಿ). ಅವರು ಯೆರಿಕೋವಿಗೆ ಬಂದಾಗ ಎಲೀಷನು ಅವರಿಗೆ, ಹೋಗಬೇಡಿರೆಂದು ನಾನು ಹೇಳಿರಲಿಲ್ಲವೋ? ಅಂದನು (ವಚನ 18). "ನಾನು ಹೇಳಿದ್ದೇ'' ಎಂಬುದು ಆತನ ಅಣಕಾಗಿತ್ತು, ಆದರೆ ಈ ಸೂಚನೆಯ ಬಲು ಮಹತ್ವದ್ದಾದ ಸೂಚನೆಯೆಂದರೆ: "ನನ್ನನ್ನು ನಾಯಕನೆಂದು ಪರಿಗಣಿಸಿದ್ದಾದರೆ, ನನ್ನ ಮಾತುಗಳನ್ನು ಒಪ್ಪಿಕೊಳ್ಳುವುದನ್ನು ಕಲಿಯಲೇಬೇಕು!'' ಎಲೀಷನು ಈಗ ಕಷ್ಟದ ಸಮಯದ ಯೆಹೋವನ ಅಧಿಕೃತವಾದ ಪ್ರತಿನಿಧಿಯಾಗಿದ್ದಾನೆ.

## ದೇವರಿಗೆ ಅವಶ್ಯವಿದ್ದ ಮನುಷ್ಯನು

### ಮೇಲ್ನೋಟಕ್ಕೆ ಕಾಣುವ ವ್ಯತ್ಯಾಸಗಳು

ನಮ್ಮ ಮುಂದಿನ ಪಾಠದಲ್ಲಿ, ನಾವು ಎಲೀಷನ ಸೇವೆಯ ಬಗೆಗೆ ಅಧ್ಯಯನವನ್ನು ಆರಂಭಿಸುವಾ. ಈ ಮಂಡನೆಯನ್ನು ಮುಗಿಸುವ ಮುನ್ನ, ಹೇಗೋ, ನಾನು ಎಲೀಷ ಮತ್ತು ಆತನ ಪೂರ್ವಾಧಿಕಾರಿ ಇಬ್ಬರನ್ನೂ ಹೋಲಿಸಬಯಸುತ್ತೇನೆ ಇಬ್ಬರು ಮನುಷ್ಯರ ಬಲು ಭಿನ್ನವಾದ ವ್ಯಕ್ತಿಗಳೆಂದೂ ಊಹಿಸುವದೂ ಬಲು ಕಷ್ಟಕರವಾದ ವಿಷಯವಾಗಿದೆ:

- ಎಲೀಯನು ಮರುಭೂಮಿಯಲ್ಲಿರುವ ಮಗುವಾಗಿದ್ದನು ಮತ್ತು ರೋಮಗಳುಳ್ಳ ಬಟ್ಟೆಗಳನ್ನು ಧರಿಸುವನಾಗಿದ್ದನು. ಎಲೀಷನು ಕೃಷಿಕನಾಗಿದ್ದನು ಮತ್ತು ಸಾಮಾನ್ಯವಾದ ಬಟ್ಟೆಗಳನ್ನು ಧರಿಸುವವನಾಗಿದ್ದನು.[6]
- ಎಲೀಯನು ಸನ್ಯಾಸಿಯಾಗಿದ್ದನು: ಆತನನ್ನು ಹುಡುಕುವದು ಕಷ್ಟಕರವಾಗಿತ್ತು. ಎಲೀಷನು ಸ್ನೇಹಪರನಾಗಿದ್ದನು; ತಮಗೆ ಅವಶ್ಯವಿದ್ದಾಗ ಅವನನ್ನು ಕಂಡುಹಿಡಿಯವದರಲ್ಲಿ ಜನರಿಗೆ ಯಾವ ತೊಂದರೆಯೂ ಆಗುತ್ತಿರಲಿಲ್ಲ.
- ಎಲೀಯನು "ವ್ಯವಸ್ಥೆಯ ಹೊರಗಡೆ'' (ಅದು, ತನ್ನ ಸಮಯದ ರಾಜಕೀಯ ಮತ್ತು ಸಾಮಾಜಿಕ ಚೌಕಟ್ಟಿನ ಹೊರಗೆ) ಕೆಲಸಮಾಡಿದನು. ಎಲೀಷನು "ವ್ಯವಸ್ಥೆಯ ಒಳಗಡೆ'' ಕೆಲಸ ಮಾಡಿದನು.
- ಎಲೀಯನು ದೇವರ ನ್ಯಾಯವನ್ನು ಮೂರ್ತಿಕರಿಸಿದರೆ ಎಲೀಷನು ಆತನ ಕರುಣೆಯನ್ನು ಮೂರ್ತಿಕರಿಸಿದನು. ಎಲೀಯನು ಮಿಂಚು ಮತ್ತು ಗುಡುಗೂ ಆಗಿದ್ದರೆ; ಎಲೀಷನು ಸೌಮ್ಯವಾಗಿ, ಬೀಳುವ ಮಳೆಯಾಗಿದ್ದನು. ಎಲೀಯನು ಪ್ರಕಾರವಾದ ಬೆಳಕಾಗಿದ್ದರೆ, ಎಲೀಷನು ನಿಶ್ಚಲವಾಗಿ, ಉರಿಯುವ ಬೆಂಕಿಯಾಗಿದ್ದನು. ಎಲೀಯನು ಯುದ್ಧವೀರನ ಥಳಥಳಿಸುವ ಕತ್ತಿಯಾಗಿದ್ದರೆ; ಎಲೀಷನು ಸ್ವಸ್ಥಮಾಡುವವನ ಕೌಶಲ್ಯಮಯವಾದ ವೈದ್ಯನ ಚೂರಿಯಂತಿದ್ದನು.

ಈ ಇಬ್ಬರು ಪ್ರವಾದಿಗಳ ವೈಕ್ತಿತ್ವದ ವ್ಯತ್ಯಾಸವು ದೇವರು *ಎಲ್ಲ ತರದ ವ್ಯಕ್ತಿಗಳನ್ನೂ ಬಳಸಬಹುದು* ಎಂಬುದನ್ನು ದೃಷ್ಟಾಂತಿಕರಿಸುವದಾಗಿದೆ. ಎಲೀಯನು ಆತನ ಜನಾಂಗಕ್ಕೆ ದೇವರಿಗೆ ಬೇಕಾದಂತಿರುವ ಆ ರೀತಿಯ ವ್ಯಕ್ತಿಯಾಗಿದ್ದನು; ಎಲೀಷನು ತನ್ನ ದಿನದಲ್ಲಿ

ದೇವರಿಗೆ ಅವಶ್ಯವಿರುವ ಮನುಷ್ಯನಾಗಿದ್ದನು. ಇಂದು ದೇವರ ಸೇವಕರಾದ ನಾವು ನಮ್ಮನ್ನು ಅವಲೋಕಿಸುವಂತೆ ಇದನ್ನು ಅರ್ಥೈಸಿಕೊಳ್ಳುವದು ನಮಗೆ ಅವಶ್ಯವಿದೆ. ಹಿಂದಿನ ದಿನಗಳಲ್ಲಿ ಇದ್ದ ಬೆಂಕಿಯೋಪಾದಿಯಂತಹ ಬೋಧಕರನ್ನು ಕೆಲವರು ಆಶಿಸುತ್ತಾರೆ. ಅಂಥ ವ್ಯಕ್ತಿಗಳು ಇನ್ನೂ ತಮ್ಮ ಸ್ಥಳವನ್ನು ಹೊಂದಿದ್ದಾರೆ, ಆದರೆ "ಮೃದು ಉತ್ತರದೊಡನೆ" ಕೋಪವನ್ನು ತಿರುಗಿಸುವಂತಹ ವ್ಯಕ್ತಿಗಳ ಅವಶ್ಯಕತೆಯು ನಮಗೆ ಇದೆ (ನೋಡಿರಿ ಜ್ಞಾನೋಕ್ತಿ 15:1). ರಕ್ಷಿಸುವಲ್ಲಿನ ದೇವರ ಶಕ್ತಿಯ ಸಪ್ಪಳ ಅಬ್ಬರಿಸುವುದರಲ್ಲಿಲ್ಲ ಬದಲಾಗಿ "ಯೋಗ್ಯವಾಗಿ" ಬೋಧಿಸುವುದರಲ್ಲಿ ಇದೆ (ದೇವರ ವಾಕ್ಯಕ್ಕೆ ನಂಬಿಗಸ್ತರಾಗಿರುವದು ತೀತ 2:1, 8; ನೋಡಿರಿ ರೋಮಾಪುರ 1:16).

ದೇವರ ಸೇವೆಯಲ್ಲಿ ನಮ್ಮ ಸಾಮರ್ಥ್ಯವನ್ನು ಅವಲೋಕಿಸಿಕೊಂಡಂತೆ ಆ ಸತ್ಯವನ್ನು ನಮ್ಮ ಮನದಲ್ಲಿ ಇಟ್ಟಿಕೊಳ್ಳುವ ಅವಶ್ಯಕತೆಯು ಸಹ ನಮಗಿದೆ. ನಾವು ನಮ್ಮ ಉಪಯೋಗ ವನ್ನು ಅಪಮೌಲ್ಯ ಮಾಡಿಕೊಳ್ಳಲೇಬಾರದು ಯಾಕೆಂದರೆ ನಾವು ಇತರರಂತಲ್ಲ. ನಾವು ಇನ್ನೊಬ್ಬರ ಕೌಶಲ್ಯಗಳನ್ನೂ ಅಥವಾ ವ್ಯಕ್ತಿತ್ವವನ್ನು ಹೊಂದಿಲ್ಲ, ಆದರೆ ನಮ್ಮದೇ ಆದ ಸ್ವಂತ ಬಲದ ಮೇಲೆ ಕೊಡುವವರಾಗಿದ್ದೇವೆ. ಮಹತ್ವದ ಅರಿತುಕೊಳ್ಳುವಿಕೆ ಎಂದರೆ ಯೆಹೋವನು ತನ್ನ ಚಿತ್ತವನ್ನು ಮಾಡುವ ಮತ್ತು ಆತನಿಗೆ ತನ್ನ ಜೀವಿತವನ್ನು ಮುಡುಪಾಗಿಡುವ *ಯಾರನ್ನಾದರೂ* ಬಳಸಿಕೊಳ್ಳುವವನಾಗಿದ್ದಾನೆ.

**ಅವಶ್ಯಕ ಹೋಲಿಕೆಗಳು**

ನಾವು ಎಲೀಯ ಮತ್ತು ಎಲೀಷ ಇಬ್ಬರ ಮಧ್ಯದಲ್ಲಿರುವ ವ್ಯತ್ಯಾಸಗಳನ್ನು ನೋಡಿ ದೆವು, ಆದರೆ ಆ ಭಿನ್ನತೆಗಳು ಬಹುವಾಗಿ ಮೇಲ್ನೋಟಕ್ಕೆ ಕಂಡುಬರುವಂತವುಗಳು ಆಗಿವೆ. ಕರ್ತನಿಗಾಗಿ ಮತ್ತು ಆತನ ಮಾರ್ಗಗಳಿಗಾಗಿ ಗಾಢವಾದ ಸಮರ್ಪಣೆಯು ಇಬ್ಬರಲ್ಲಿಯೂ ಒಂದೇ ತರವಾಗಿದ್ದು ಅದು ಮಹತ್ವದ ಅಂಶವಾಗಿದೆ. ಆ ದಿವಸಕೋಸ್ಕರ ದೇವರು ಅಪೇಕ್ಷಿಸಿದ ದೇವರ ಮನುಷ್ಯನಾದ ಎಲೀಷನ ಗುಣಲಕ್ಷಣಗಳನ್ನು ಅವಲೋಕಿಸಿರಿ:

- ಆತನು ದೇವರಲ್ಲಿ ಆಳವಾದ ನಂಬಿಕೆಯನ್ನು ಇಟ್ಟಿದ್ದನು.
- ಆತನು ದೇವರ ಮನುಷ್ಯನು (2 ಅರಸು 4:9).
- ಆತನು ದೇವರ ಚಿತ್ತವನ್ನು ಮಾಡಲು ಕಾತುರವುಳ್ಳವನಾಗಿರುತ್ತಿದ್ದನು (1 ಅರಸು 19:19, 20).
- ಆತನು ತನ್ನ ಹಿಂದಿನದನ್ನು ಕಳೆದುಕೊಳ್ಳಲು ಸಿದ್ಧನಿದ್ದನು (1 ಅರಸು 19:21).
- ಆತನು ಸೇವೆಮಾಡಲು ಸಿದ್ಧನಿದ್ದನು (2 ಅರಸು 3:11).
- ಸಿದ್ಧವಾಗಲು ಹತ್ತು ವರ್ಷ ತೆಗೆದುಕೊಂಡರೂ ಆತನು ಬಿಟ್ಟುಹೋಗುವಂತವ ನಿರಲಿಲ್ಲ. (ಕೆಲವರು ದೀಢಿರ್ ಬಹುಮಾನ, ದಿಢೀರ್ ಲಾಭ, ದಿಢೀರ್ ಯಶಸ್ಸನ್ನು ಬಯಸುವವರಾಗಿರುತ್ತಾರೆ.)
- ತಾನು ಮಾಡಿದ ಸಮರ್ಪಣೆ ಅಂದರೆ ಕೊನೆಯ ತನಕ ಎಲೀಯನನ್ನು ಹಿಂಬಾಲಿಸಲು ಅಡೆತಡೆಗಳು ಬಂದರೂ ಕೂಡಾ ಒಪ್ಪಂದಗಳಿಗೆ ಆತನು ನಂಬಿಗಸ್ತನಾಗಿ ಉಳಿದನು (2 ಅರಸು 2:2, 4, 6, 10-12).
- ಆತನು ಜವಾಬ್ದಾರಿಗಳನ್ನು ಹೊತ್ತುಕೊಂಡನು, ಆ ಜವಾಬ್ದಾರಿಗಳು ಎಷ್ಟೋ ಬಾರ ವಾಗಿದ್ದವು ಎಂದು ತಿಳಿದಿದ್ದಾಗಲೂ ಕೂಡಾ ಅವುಗಳನ್ನು ಸ್ವೀಕರಿಸಿದನು. ವಿಗ್ರಹಾರಾಧನೆಯ ಸಮಾಜದಲ್ಲಿ ಯೆಹೋವನ ಪ್ರತಿನಿಧಿಯಾಗಿರುವಂತೆ ಆತನನ್ನು ಅದು ಪ್ರಖ್ಯಾತಿಗೆ ತರಲಿಲ್ಲ (ನೋಡಿರಿ 2 ಅರಸು 2:23). ಅದಲ್ಲದೆ ಎಲೀಷನು ದೇವರು ಆತನ ಮುಂದೆ ಇರಿಸಿದ ಪಾತ್ರವನ್ನು ಆತನು ಬಲ್ಲವನಾಗಿದ್ದನು (1 ಅರಸು

19:16; 2 ಅರಸು 2:9).

ನಾವು ಇತರೆ ಗುಣಗಳನ್ನು ಅದರಲ್ಲಿ ಸೇರಿಸುವಾ. ಉದಾಹರಣೆಗಾಗಿ, ಎಲೀಷನು ನಿಶ್ಚಿತವಾಗಿ ಜನರಲ್ಲಿ, ಎಲ್ಲಾ ತರದ ಜನರಲ್ಲಿ ಅಂದರೆ ಮೇಲ್ತರ ಮತ್ತು ಕೆಳತರದ ಜನರಲ್ಲಿ ಆಸಕ್ತನಾಗಿದ್ದನು ಎಂಬುದನ್ನು ನಾವು ನೋಡುತ್ತೇವೆ. ಹೇಗೋ ಪಟ್ಟಿ ಮಾಡಲ್ಪಟ್ಟ ಗುಣಗಳು ಸಾಕಷ್ಟಿವೆ. ತಿರುಗಿ, ದೇವರು ನಿನ್ನನ್ನು ತನ್ನ ಸೇವೆಗಾಗಿ ಉಪಯೋಗಿಸುವನು, ನಿನ್ನ ವ್ಯಕ್ತಿತ್ವವೇನಾಗಿದೆ ಮತ್ತು ನಿನ್ನ ತಲಾಂತುಗಳು ಏನಾಗಿರಬಹುದು ಎಂಬುದನ್ನು ಆತನು ಗಣನೆಗೆ ತರಲಾರನು ... ನೀನು ಮೊದಲು ನಿನ್ನ ಜೀವಿತವನ್ನು ಆತನಿಗೆ ಸಮರ್ಪಿಸಿದ್ದೇ ಆಗಿದ್ದರೆ ಮಾತ್ರ ಎಂದು ಒತ್ತಿ ಹೇಳುವವನಾಗಿದ್ದೇನೆ.

## ಮುಕ್ತಾಯ

"ಅದನ್ನು ಅನುಸರಿಸುವ ಕಾರ್ಯವು ಬಲು ಕಷ್ಟದಾಯಕ (ಕಠಿಣದಾಯಕ)" ಎಂದು ಹೇಳಬಹುದು. ವಡುವಿಲ್ಲೆಯ ದಿನದ ಒಂದು ವಿವರಣೆಯ, ವೇದಿಕೆಯು ಒಂದರ ನಂತರ ಇನ್ನೊಂದು ಅಭಿನಯವನ್ನು ತೋರಿಸುವದು ಅದರ ವೈಶಿಷ್ಟತೆಯು ಆಗಿತ್ತು. ಒಂದು ಅಭಿನಯವು ನಿಶ್ಚಿತವಾಗಿ ವಿಶೇಷವಾಗಿ ಒಳ್ಳೆಯ ರೀತಿಯಿಂದ ತಲುಪಲ್ಪಟ್ಟಾಗ ಮುಂದಿನ ಕಲಾಕಾರನು ಹಿಂದಿನ ಕಲಾಕಾರನು ಮಾಡಿದ ಅಭಿನಯವನ್ನು ಗಮನದಲ್ಲಿ ಇಟ್ಟುಕೊಳ್ಳುವದು ಸೂಕ್ತ ಹಾಗಾಗದಿದ್ದರೆ ವೀಕ್ಷಕರನ್ನು ಅದು ವಿಶ್ರಾಂತ ಹೀನ ಮಾಡುವುದುಂಟು. ಅತೀ ಪ್ರೀತಿಗೆ ಒಳಗಾದ ಒಬ್ಬ ಬೋಧಕನು ಸಭೆಯನ್ನು ಬಿಟ್ಟು ಬಿಟ್ಟಾಗ, ನಂತರದ ಬೋಧಕನು ಹಿಂದಿನ ಬೋಧಕನನ್ನು ಅನುಸರಿಸುವದು "ಕಷ್ಟಕರವಾದ ಕಾರ್ಯವಾಗುತ್ತದೆ."

ಎಲೀಯನನ್ನು "ಅನುಸರಿಸಲು ಕಷ್ಟಕರವಾದದ್ದು" ಆಗಿತ್ತು. ಆತನ ಸೇವೆಯು ಮುಖ್ಯ ವಾಗಿ ಆಕರ್ಷಣೀಯವಾದ ಕಾರ್ಯಗಳನ್ನು ಒಳಗೊಂಡ ಸೇವೆ ಆಗಿತ್ತು. ಆತನು ಯೆಹೂದಿ ಜನರ ನಾಯಕನು ಆಗಿದ್ದನು. ಮೆಸ್ಸೀಯನ ಬರೋಣದ ಸಮಯದಲ್ಲಿ ಆತನಿಗಿಂತ ಮುಂಚೆ ಬರುವವನುಎಂದು ಆತನನ್ನು ಅವರು ಎದರು ನೋಡುವವರಾಗಿದ್ದರು (ನೋಡಿರಿ ಮತ್ತಾಯ 17:10). ರೂಪಾಂತರ ಬೆಟ್ಟದಲ್ಲಿ ಆತನು ಮೋಶೆ ಮತ್ತು ಯೇಸುವಿನ ಜೊತೆಯಲ್ಲಿ ನಿಲ್ಲುವವನಾಗಿದ್ದನು (ಮತ್ತಾಯ 17:3).

"ಅನುಸರಿಸಲು ಕಷ್ಟಕರವಾದ ಕಾರ್ಯವನ್ನು" ನೀವು ಹೊಂದಿದಾಗ ನೀವೇನು ಮಾಡುವಿರಿ? ನೀವೇನು ಮಾಡಬಹುದೋ ಅದನ್ನು ಮಾಡಬಲ್ಲಿರಿ. ದೇವರು ಕೊಟ್ಟ ವರಗಳನ್ನು ನೀವು ಬಳಸಿರಿ, ಮತ್ತು ನಿಮಗೆ ಯೋಗ್ಯವಾದದ್ದನ್ನೇ ನೀವು ಮಾಡಿರಿ. ಅದನ್ನೇ ಎಲೀಷನು ಮಾಡಿದನು. ಆತನು ಎಲೀಯನ ನಿಸ್ತೇಜವಾದ ನಕಲಾಗಲಿಲ್ಲ. ಆತನು ಕೇವಲ ತನ್ನ ಗುರುವಿನ ನೆರಳಾಗಿರಲಿಲ್ಲ, ಆತನ ಪ್ರತಿಧ್ವನಿಯಾಗಿರಲಿಲ್ಲ. ಆತನು ತನ್ನದೇ ಆದ ವ್ಯಕ್ತಿತ್ವವನ್ನು ಹೊಂದಿದ್ದನು. ಆತನು ತನ್ನ ದಿನದಲ್ಲಿನ ದೇವರಿಗೆ ಅವಶ್ಯವಿರುವ ಮನುಷ್ಯನಾಗಿದ್ದನು, ಕಷ್ಟದ ಸಮಯದಲ್ಲಿನ ದೇವರ ಮನುಷ್ಯನಾಗ್ದಿನು, ಮತ್ತು ಆತನ ಕಾರ್ಯವನ್ನು ಸಂಪೂರ್ಣಗೊಳಿಸುವವನಾಗಿದ್ದನು. ದೇವರು ಒಬ್ಬನಿಂದ ಹೆಚ್ಚಿನದೇನನ್ನೂ ಕೇಳುವುದಿಲ್ಲ.

---
ಟಿಪ್ಪಣೆಗಳು

[1]Joseph Hammond, "1 Kings," *The Pulpit Commentary,* vol. 5, *1st & 2nd Kings*, ed. H. D. M. Spence and Joseph S. Exell (Grand Rapids, Mich.: Wm. B. Eerdmans Publishing Co., 1950), 463. [2]"ದೇವರ ರಕ್ಷಕನಾಗಿದ್ದಾನೆ" ಅಥವಾ ದೇವರು ರಕ್ಷಿಸುತ್ತಾನೆ

ಎಂಬುದನ್ನು ಒಳಗೊಂಡು ಇತರ ಸಾಧ್ಯತೆಗಳು ಸೂಚಿಸಲ್ಪಟ್ಟಿವೆ. ಎಲೀಷನ ಬಗೆಗೆ ನಾವುತಿಳಿದಿರುವ ಮತ್ತೊಂದು ಸಂಗತಿಯೆಂದರೆ: ಎಲೀಯನಂತೆಯೇ ಆತನೂ ಸಹ ಮದುವೆಯಾಗಿಯಾಗಿರಲಿಲ್ಲ. [3]Donald J. Wisemen, *1 and 2 Kings: An Introduction and Commentary,* Tyndale Old Testament Commentaries (Downers Grove, Ill.: Inter-Varsity Press, 1993), 31. [4]Henry Blunt, *Lectures on the History of Elisha* (Philadelphia: Herman Hooker, 1839), 196. [5]ಎಲೀಯನ ಕಂಬಳಿಯ ಬಗೆಗೆ ಇದೇ ಕೊನೆಯ ಸಾರಿ ಮಾತನಾಡುವುದಾಗಿದೆ. ಎಲೀಷನು ಇದನ್ನು ತಿರುಗಿ ಉಪಯೋಗಿಸಿದ್ದಾದರೂ ಅದರ ಬಗೆಗೆ ಯಾವ ದಾಖಲೆಗಳೂ ಇಲ್ಲ. ಪ್ರತ್ಯಕ್ಷವಾಗಿ ಅದು ತನ್ನ ಉದ್ದೇಶವನ್ನು ಮುಗಿಸಿದೆ. [6]2 ಅರಸು 2:12ರಲ್ಲಿನ “ಬಟ್ಟೆಗಿರುವ” ಇಬ್ರೀಯ ಪದವನ್ನು ಸೂಚಿಸುವದಾಗಿದೆ.